ದಿನಾಂಕಃ 23.03.2026.

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯ್ತು.

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಎಸ್ ಎನ್ ವಕೀಲರಿಂದಃ-</u>**

1. ಆರೋಪಿ ನಿಮ್ಮ ಬಳಿ ಯಾವಾಗ ಹಣ ಕೇಳಿದರು ಎಂದರೆ ಸಾಕ್ಷಿ ನನಗೆ 2017 ರಲ್ಲಿ ಪರಿಚಯ ಆಗಿದ್ದು, ನಂತರ 2 ತಿಂಗಳು ಬಿಟ್ಟು ನನ್ನ ಬಳಿ ಹಣ ಕೇಳಿದರು ಎಂದು ನುಡಿಯುತ್ತಾರೆ. ಮೊದಲು ಆರೋಪಿ ನನ್ನ ಬಳಿ 2 ಲಕ್ಷ ಹಣ ತೆಗೆದುಕೊಂಡು ಅದನ್ನು ವಾಪಸ್ಸು ಕೊಟ್ಟು ನಂತರ 2018 ರಲ್ಲಿ 10 ಲಕ್ಷ ಹಣ ಪಡೆದಿರುತ್ತಾರೆ. ನಾನು ಆರೋಪಿ ಬಳಿ 2 ಲಕ್ಷ ಹಣ ಕೊಟ್ಟಾಗ ಭದ್ರತೆಗಾಗಿ ಎರಡು ಖಾಲಿ ಚೆಕ್ ಪಡೆದಿದ್ದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ದೊಡ್ಡ ಮೊತ್ತದ ವ್ಯವಹಾರ ಮಾಡಿದರೆ ದಾಖಲೆ ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಮೊದಲು ಹಣ ಪಡೆದು ಕೊಟ್ಟಿದ್ದರಿಂದ ಮತ್ತೆ ಹಾಗೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

2. ಆ ರೀತಿ ದೊಡ್ಡ ಮೊತ್ತದ ಹಣ ಕೊಟ್ಟಾಗ ಆರೋಪಿ ಕಡೆಯಿಂದ ನೀವು ಯಾವುದಾದರೂ ಕರಾರು ಮಾಡಿಕೊಳ್ಳಲು ಅಥವಾ ದಾಖಲೆ ಮಾಡಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಮೊದಲು ಪಡೆದು ವಾಪಸ್ಸು ಕೊಟ್ಟಿದ್ದರಿಂದ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನನ್ನ ಬಳಿ ನಾನು ಹೇಳಿದ ರೀತಿ 10 ಲಕ್ಷ ಹಣ ಪಡೆಯದ ಕಾರಣ ನಾನು ಯಾವುದೇ ಕರಾರು ಪತ್ರ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

3. ನಾನು ಆರೋಪಿಗೆ 10 ಲಕ್ಷ ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಸದರಿ ಹಣ ನಮ್ಮ ತೋಟದ ಅಡಿಕೆಯಿಂದ ಬಂದ ಹಣ ಮನೆಯಲ್ಲಿತ್ತು ಎಂದು ನುಡಿಯುತ್ತಾರೆ. ನಮಗೆ ಸದರಿ ಹಣ ಅಡಿಕೆ ಮತ್ತು ಭತ್ತದಿಂದ ಬಂದಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿಲ್ಲ. ಆರೋಪಿಗೆ ಆ ದಿನ 500/- ಮುಖಬೆಲೆಯ ಹಣ ಕೊಟ್ಟಿರುತ್ತೇನೆ. ಆ ರೀತಿ ನಾನು ಹಣ ಕೊಡುವಾಗ ಆರೋಪಿ ಒಬ್ಬರೇ ಇದ್ದರು. ನಾನು ಆರೋಪಿಗೆ ಯಾವುದೇ 10

ಲಕ್ಷ ಹಣ ಕೊಡದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಆರೋಪಿಗೆ 10 ಲಕ್ಷ ಹಣ ಕೊಡಲು ನನಗೆ ಆರ್ಥಿಕ ಶಕ್ತಿ ಇಲ್ಲ ಎಂದರೆ ಸರಿಯಲ್ಲ.

4. ಕಾನೂನು ಪ್ರಕಾರ ರೂ 20 ಸಾವಿರಕ್ಕಿಂತ ಹೆಚ್ಚಿನ ಹಣ ಕೊಡಬೇಕಾದರೆ ಅದನ್ನು ಖಾತೆ ಮೂಲಕ ಕೊಡಬೇಕೆಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ಆರೋಪಿಯನ್ನು ನೀವು ಮತ್ತೆ ಯಾವಾಗ ವಾಪಸ್ಸು ಹಣ ಕೇಳಿದ್ದೀರಿ ಎಂದರೆ ಸಾಕ್ಷಿ ನನ್ನ ಬಳಿ 15 ದಿನಕ್ಕೆ ಕೊಡುತ್ತೇನೆ ಎಂದು ಹೇಳಿ ಪಡೆದುಕೊಂಡಿದ್ದು, ನಂತರ 3 ತಿಂಗಳಾದರೂ ಕೊಡದಿದ್ದ ಕಾರಣ ನಾನು ಹೋಗಿ ಕೇಳಿದಾಗ ಚೆಕ್ ಕೊಟ್ಟಿರುತ್ತಾರೆ. ನಾನು ಆರೋಪಿಗೆ ನನ್ನ ಬಳಿ 15 ದಿನಕ್ಕೆ ವಾಪಸ್ಸು ಕೊಡುತ್ತೇನೆ ಎಂದು ಹೇಳಿ ಹಣ ಪಡೆದ ಎಂದು ಸುಳ್ಳು ಹೇಳುತ್ತಿದ್ದು, ನಾನು ಆರೋಪಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ.

5. ನಾನು ಮೊದಲು ಬ್ಯಾಂಕ್ ಗೆ ಚೆಕ್ ಹಾಕಿದ ಮೇಲೆ ಆರೋಪಿಗೆ ನೋಟೀಸ್ ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ಅವರು ಟೈಂ ಪಡೆದರು ಎಂದು ನುಡಿಯುತ್ತಾರೆ. ನನಗೆ ಮೊದಲನೇ ಚೆಕ್ಕನ್ನು ಆರೋಪಿ ದಿಃ 30.06.2018 ರಲ್ಲಿ ಕೊಟ್ಟಿರುತ್ತಾರೆ. ಆ ರೀತಿ ಅವರು ನಮ್ಮ ಮನೆಗೆ ಬಂದು ಚೆಕ್ ಕೊಟ್ಟಿರುತ್ತಾರೆ. ಆ ರೀತಿ ಚೆಕ್ ಕೊಡುವಾಗ ನಾನು ಮನೆಯಲ್ಲಿ ಒಬ್ಬನೇ ಇದ್ದೆ. ಆರೋಪಿ ನನಗೆ ಆ ದಿನ ಯಾವುದೇ ಚೆಕ್ ಕೊಡದೇ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನಗೆ ಆರೋಪಿ 2 ನೇ ಚೆಕ್ಕನ್ನು ದಿಃ 12.11.2018 ರಂದು ಕೊಟ್ಟಿರುತ್ತಾರೆ. ಆ ರೀತಿ ಸದರಿ ಚೆಕ್ ಕೊಡುವಾಗ ಸಹ ಆರೋಪಿ ಒಬ್ಬನೇ ಇದ್ದ. ನನ್ನ ನೋಟೀಸಿನಲ್ಲಿ ದಿಃ 12.12.2018 ರಂದು ನನಗೆ ಚೆಕ್ ಕೊಟ್ಟ ಬಗ್ಗೆ ತಿಳಿಸಿದ್ದೇನೆ ಎಂದರೆ ಸಾಕ್ಷಿ ಅದರಲ್ಲಿ ಬರೆದಿದೆ, ಒಮ್ಮೊಮ್ಮೆ ಹೆಚ್ಚು ಕಮ್ಮಿ ಆಗುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ನನ್ನ ದೂರಿನಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಸಹ ನನಗೆ 2 ನೇ ಚೆಕ್ಕನ್ನು ದಿಃ 12.12.2018 ರಂದು ಕೊಟ್ಟ ಬಗ್ಗೆ ತಿಳಿಸಿದ್ದೇನೆ ಎಂದರೆ ಸಾಕ್ಷಿ ಹೆಚ್ಚು ಕಮ್ಮಿ ಆಗುತ್ತದೆ ಎಂದು ನುಡಿಯುತ್ತಾರೆ. ನಾನು 2 ನೇ ಚೆಕ್ಕನ್ನು ದಿಃ 04.01.2019 ರಂದು ಬ್ಯಾಂಕ್ ಗೆ ಹಾಜರುಪಡಿಸಿದ್ದೇನೆ. ಆರೋಪಿ ನನಗೆ 2 ನೇ

ಚೆಕ್ ಕೊಟ್ಟ ಎಂದು ಸುಳ್ಳು ಹೇಳುತ್ತಿದ್ದು, ದಿಃ 12.11.2018 ರಂದು ನನಗೆ ಆರೋಪಿ ಯಾವುದೇ ಚೆಕ್ ಕೊಟ್ಟಿಲ್ಲ ಎಂದರೆ ಸರಿಯಲ್ಲ.

7. ನನಗೆ ಆರೋಪಿಗೆ ನೋಟೀಸ್ ಕೊಟ್ಟ ಬಗ್ಗೆ ಮಾಹಿತಿ ಇದೆ. ಸದರಿ ನೋಟೀಸ್ ಆರೋಪಿಗೆ ತಲುಪಿದೆ. ನಾನು ಆರೋಪಿಗೆ ಯಾವುದೇ ನೋಟೀಸ್ ಕೊಟ್ಟಿಲ್ಲ ಮತ್ತು ಸದರಿ ನೋಟೀಸ್ ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನಿಪಿ – 5 ರಲ್ಲಿ ತಿಳಿಸಿರುವಂತೆ ದಿಃ 12.11.2018 ರಂದು ನೀವು ಬ್ಯಾಂಕ್ ಗೆ ಚೆಕ್ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಆ ಮೇಲೆ ದಿಃ 04.01.2019 ರಂದು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ನೋಟೀಸಿನಲ್ಲಿ ದಿಃ 12.11.2018 ರಂದು ಕಾರ್ಪೊರೇಷನ್ ಬ್ಯಾಂಕ್ ಚೆಕ್ ಹಾಜರುಪಡಿಸಿರುವ ಬಗ್ಗೆ ನಮೂದಿಸಿದೆ ಎಂದರೆ ಸಾಕ್ಷಿ ಅದು ಸುಳ್ಳು ಎಂದು ನುಡಿಯುತ್ತಾರೆ. ನನ್ನ ನೋಟೀಸಿನಲ್ಲಿ ಅಂದರೆ ನಿಪಿ – 5 ರಲ್ಲಿ ತಿಳಿಸಿರುವಂತೆ ದಿಃ 12.12.2018 ಕ್ಕೆ ಚೆಕ್ ಕೊಟ್ಟರೆ ದಿಃ 12.11.2018 ರಂದು ಹಾಜರುಪಡಿಸಲು ಬರುವುದಿಲ್ಲ ಎಂದರೆ ಸಾಕ್ಷಿ ಬರುತ್ತದೆ ಎಂದು ನುಡಿಯುತ್ತಾರೆ. ಆ ಕಾರಣದಿಂದ ನಾನು ಹೇಳಿದ ರೀತಿ ಆ ದಿನ ಆರೋಪಿ ನನಗೆ ಯಾವುದೇ ಚೆಕ್ ಕೊಡದೇ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ 2 ಲಕ್ಷ ಹಣ ಕೊಟ್ಟ ಸಮಯದಲ್ಲಿ ಆರೋಪಿ ನನಗೆ ಭದ್ರತೆಗಾಗಿ ಕೊಟ್ಟಿದ್ದ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಈ ರೀತಿಯ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ.

8. ನಿಪಿ – 2 ರಲ್ಲಿರುವ ಸಹಿ ಆರೋಪಿಯದ್ದಲ್ಲ, ಅದನ್ನು ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ – 2 ರಲ್ಲಿರುವ ಬರವಣಿಗೆಯನ್ನೂ ಸಹ ನಾನೇ ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸಾಕ್ಷಿ ಬರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ಓದಲು ಬರೆಯಲು ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದಾರೆ, ನೀಡಲಾಗಿದೆ)**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.**

**ಓ ಹೇ ಕೇ ಸ ಇದೆ.**

**ಹಿರಿಯ ವ್ಯವಹಾರ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಶಿಕಾರಿಪುರ.**